**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂ: ಡಿಸಿಇ/ಟಿಆರ್‌ಎನ್/1/2022-ಟಿಡಿಜಿ

ಕಾಲೇಜು & ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು. ದಿ:06.12.2022

**ಸುತ್ತೋಲೆ**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಒಳಪಡುವ ಬೋಧಕ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ಹಾಗೂ ವರ್ಗಾವಣೆ ಅಧಿಸೂಚನೆ ದಿನಾಂಕ:05.12.2022.

** ** **

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕರ (ಪ್ರಾಧ್ಯಾಪಕರು, ಸಹ/ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ಕ್ರೀಡಾ & ದೈಹಿಕ ಶಿಕ್ಷಣ ನಿರ್ದೇಶಕರು) ವರ್ಗಾವಣೆಗಳನ್ನು ಕೈಗೊಳ್ಳುವ ಸಲುವಾಗಿ ವರ್ಗಾವಣೆ ನಿಯಮಗಳ ನಿಯಮ 5ರಲ್ಲಿ ತಿಳಿಸಿರುವಂತೆ ನಿಗದಿತ ಸೇವಾವಧಿಯನ್ನು ಪೂರೈಸಿ ಮಂಜೂರಾದ ಬೋಧಕರ ಹುದ್ದೆಗಳ ಶೇಕಡಾ 9 ರ ಮಿತಿಗೊಳಪಟ್ಟು EMIS ತಂತ್ರಾಂಶದಲ್ಲಿ ದಾಖಲಿತ ಮಾಹಿತಿಯನ್ವಯ ಕಡ್ಡಾಯ ವರ್ಗಾವಣೆಗೆ ಅರ್ಹರಾಗುವ ಬೋಧಕರ ಪಟ್ಟಿಯನ್ನು ಉಲ್ಲೇಖಿತ ಸುತ್ತೋಲೆಯನ್ವಯ ಪ್ರಕಟಿಸಲಾಗಿತ್ತು.

ಸದರಿ ಪಟ್ಟಿಯಲ್ಲಿನ ಹಲವಾರು ಬೋಧಕರು ಪ್ರಸ್ತುತ ಕರ್ತವ್ಯನಿರ್ವಹಿಸುತ್ತಿರುವ ಕಾಲೇಜಿನಲ್ಲಿ ವರದಿ ಮಾಡಿಕೊಂಡ ದಿನಾಂಕವನ್ನು ತಪ್ಪಾಗಿ ನಮೂದಿಸಿರುವ ಬಗ್ಗೆ ಈ ಕಛೇರಿಯಲ್ಲಿ ಮನವಿಗಳು ಸ್ವೀಕೃತವಾಗುತ್ತಿದೆ. ಈಗಾಗಲೇ ಹಲವಾರು ಬಾರಿ EMIS ತಂತ್ರಾಂಶದಲ್ಲಿ ಬೋಧಕರ ಸೇವಾ ವಿವರಗಳನ್ನು update ಮಾಡಲು ಸೂಚನೆಗಳನ್ನು ನೀಡಿದ್ದಾಗ್ಯೂ ಈ ರೀತಿಯ ಲೋಪದೋಷಗಳು ಉಂಟಾಗುತ್ತಿರುವುದರಿಂದ ಅಧೀನ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸಂಬಂಧಪಟ್ಟ ಬೋಧಕರು EMIS ತಂತ್ರಾಂಶದಲ್ಲಿ ದಿನಾಂಕ:06.12.2022ರ ಸಂಜೆ 6.00 ಗಂಟೆ ಒಳಗಾಗಿ ಅಗತ್ಯ ತಿದ್ದುಪಡಿಗಳನ್ನು ಮಾಡಲು ಸೂಚಿಸಲಾಗಿದೆ. ಸದರಿ ಮಾಹಿತಿಯನ್ವಯ ಕಡ್ಡಾಯ ವರ್ಗಾವಣೆಯ ಆದ್ಯತಾ ಪಟ್ಟಿಯನ್ನು ತಯಾರಿಸಬೇಕಿರುವುದರಿಂದ ಪ್ರಾಂಶುಪಾಲರುಗಳು ವೈಯಕ್ತಿಕ ಗಮನಹರಿಸಿ ತಿದ್ದುಪಡಿಗಳನ್ನು ಮಾಡುವಂತೆ ತಿಳಿಸಲಾಗಿದೆ. ನಿಗದಿತ ಅವಧಿಯೊಳಗೆ ತಿದ್ದುಪಡಿಯನ್ನು ಮಾಡದೇ ವರ್ಗಾವಣೆ ಪಟ್ಟಿಯಲ್ಲಿ ತಪ್ಪುಗಳು ಉಂಟಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರು ಹಾಗೂ ಬೋಧಕರನ್ನು ನೇರ ಹೊಣೆಗಾರರನ್ನಾಗಿ ಮಾಡಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

06/12/2022

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖೆ**

**ಪ್ರತಿಯನ್ನು:**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಬೋಧಕರುಗಳಿಗೆ -ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರಗಿ-ಮಾಹಿತಿಗಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ರಕ್ಷಾ ಕಡತ. 5. ಕಛೇರಿ ಪ್ರತಿ.